# ‘ಆವೆ ಅಂಕಣ’ದ ಚಕ್ರವರ್ತಿ

ದಾಖಲೆ ಹತ್ತನೇ ಬಾರಿ ಫ್ರೆಂಚ್ ಓಪನ್ ಟೆನಿಸ್ ಪ್ರಶಸ್ತಿ ಗೆದ್ದುಕೊಂಡಿರುವ ರಫಾ ನಡಾಲ್, ಎಟಿಪಿ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೆ ಜಿಗಿದಿದ್ದಾರೆ. ಮೊದಲ ರ‍್ಯಾಂಕ್ ನಲ್ಲಿರುವ ಆ್ಯಂಡಿ ಮರ‍್ರೆಯನ್ನು ಅಧಿಕೃತವಾಗಿ ಹಿಂದಿಕ್ಕಲು ರಫಾಗೆ ಇನ್ನೊಂದು ವಿಂಬಲ್ಡನ್ ಪ್ರಶಸ್ತಿ ಸಾಕು. ಆದರೆ ಗ್ರ್ಯಾನ್‌ಸ್ಲಾಮ್‌ನಲ್ಲಿ ಅತ್ಯಧಿಕ ಪ್ರಶಸ್ತಿಗಳ ದಾಖಲೆ ಇರುವುದು ಫೆಡರರ್ ಹೆಸರಲ್ಲಿ. ಈವರೆಗೆ ಆತ ಒಟ್ಟು 18 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದರೆ, ರಫಾ ಒಟ್ಟು 15 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದಾನೆ. ಆದರೆ ವಿಶ್ಲೇಷಕರ ಪ್ರಕಾರ, ಇವತ್ತು ವಿಶ್ವದ ಸರ್ವಶ್ರೇಷ್ಠ ಟೆನಿಸ್ ಆಟಗಾರನೆಂದರೆ ಫೆಡರರ್ ಅಥವಾ ಮರ‍್ರೆ ಅಲ್ಲ, ಅದು ರಫಾ ನಡಾಲ್!

‘15 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಿಗಿಂತ 18 ದೊಡ್ಡದಲ್ಲವೆ?’ ಎಂದು ಅಂಕಗಣಿತ ಬಲ್ಲವರು ಕೇಳುವುದು ಸಹಜವೇ. ಸ್ಕೂಲ್‌ನಲ್ಲಿರುವಾಗ ಗಣಿತದಲ್ಲಿ ಫೇಲ್ ಆಗಿದ್ದ ರಫಾ, ಈಗ ಟೆನಿಸ್‌ನ ಅಂಕಗಣಿತವನ್ನೂ ಮೀರಿ ಬೆಳೆದಿದ್ದಾನೆ ಎನ್ನುವ ವಿಶ್ಲೇಷಣೆ ನಿಜಕ್ಕೂ ಕುತೂಹಲಕರವೇ.

ರಫಾ ಹೆಗ್ಗಳಿಕೆಯನ್ನು ಹೀಗೆ ಲೆಕ್ಕ ಹಾಕಬಹುದು: ಸದ್ಯ ವಿಶ್ವ ಟೆನಿಸ್‌ನಲ್ಲಿ ‘ಬಿಗ್ ಫೋರ್’ ಎಂದು ಕರೆಯಲ್ಪಡುವವರು ರೋಜರ್ ಫೆಡರರ್, ರಫಾ ನಡಾಲ್, ನೊವಾಕ್ ಜೊಕೊವಿಚ್ ಮತ್ತು ಆ್ಯಂಡಿ ಮರ‍್ರೆ. ಈಗ ವಿಶ್ವದ ‘ನಂಬರ್ ಫೈವ್’ ರ‍್ಯಾಂಕ್ ನಲ್ಲಿರುವ ಫೆಡರರ್, 2003ರಿಂದ 2007ರವರೆಗೆ ಒಟ್ಟು ಎಂಟು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಾತ. 2009ರಲ್ಲಿ ಮತ್ತೆ ಎರಡು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದ. ಆದರೆ ಅಷ್ಟೂ ವರ್ಷಗಳಲ್ಲಿ ಫೆಡರರ್, ಈ ಮೇಲಿನ ಮೂವರನ್ನು ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಎದುರಿಸಿಯೂ ಇಲ್ಲ, ಸೋಲಿಸಿಯೂ ಇಲ್ಲ. ಅಷ್ಟೂ ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಫೆಡರರ್‌ಗೆ ಫೈನಲ್‌ನಲ್ಲಿ ಎದುರಾದವರು ಅಷ್ಟೇನೂ ಪ್ರಬಲ ಆಟಗಾರರಲ್ಲದ ಮಾರ್ಕ್ ಫಿಲಿಪೋಸಿಸ್, ಫರ್ನಾಂಡೊ ಗೊನ್ಸಾಲ್ವಿಸ್ ಮುಂತಾದವರು. ಅಕಸ್ಮಾತ್ ಈ ಗ್ರ್ಯಾನ್‌ಸ್ಲಾಮ್‌ಗಳಲ್ಲಿ ರಫಾ ಎದುರಾಗಿದ್ದರೆ ಫೆಡರರ್ ಸೋಲುವುದು ಗ್ಯಾರಂಟಿ ಇತ್ತು!

ಹಾಗೆ ನೋಡಿದರೆ ಫೆಡರರ್ ತಾನು ಈವರೆಗೆ ಗೆದ್ದ 15 ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಎರಡರಲ್ಲಿ ಮಾತ್ರ ಈ ‘ಬಿಗ್ ಫೋರ್’ ಪಟ್ಟಿಯ ಒಬ್ಬರನ್ನು ಸೋಲಿಸಿದ್ದಾನೆ. ಇದನ್ನು ಫೆಡರರ್‌ನ ಅದೃಷ್ಟ ಎನ್ನುತ್ತೀರೋ ಅಥವಾ ಉಳಿದವರ ದುರಾದೃಷ್ಟ ಎನ್ನುತ್ತೀರೋ?

ಈ ಹಿನ್ನೆಲೆಯಲ್ಲೇ ಫೆಡರರ್ ಮತ್ತು ರಫಾ ನಡುವೆ ಈಗ ಹೋಲಿಕೆ ನಡೆದಿದೆ. ಫೆಡರರ್ ಮತ್ತು ರಫಾ ನಡುವಣ ನೇರ ಫೈಟ್‌ಗಳನ್ನೇ ಲೆಕ್ಕ ಹಾಕಿದರೂ ರಫಾಗೆ ಫೆಡರರ್ ಹೋಲಿಕೆಯೇ ಅಲ್ಲ! ಇಬ್ಬರ ನಡುವೆ ಈವರೆಗೆ ಒಟ್ಟು 37 ನೇರ ಸ್ಪರ್ಧೆಗಳು ನಡೆದಿವೆ. ಅವುಗಳಲ್ಲಿ ರಫಾ ಗೆದ್ದದ್ದು 23 ಸಲ! ಗ್ರ್ಯಾನ್‌ಸ್ಲಾಮ್‌ಗಳಲ್ಲಿ ಇಬ್ಬರೂ ಈವರೆಗೆ 12 ಸಲ ನೇರ ಸೆಣಸಾಟ ನಡೆಸಿದ್ದಾರೆ. ಅದರಲ್ಲೂ ರಫಾ ಗೆದ್ದದ್ದು 9 ಸಲ! ಈಗ ಹೇಳಿ, ಯಾರು ನಿಜಕ್ಕೂ – ನಂಬರ್ ಒನ್?



ರಫಾ ‘ಆವೆ ಅಂಕಣದ ಚಕ್ರವರ್ತಿ’ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಆವೆ ಅಂಕಣದ ಫ್ರೆಂಚ್ ಓಪನ್ ಪ್ರಶಸ್ತಿಯನ್ನು ಹತ್ತನೇ ಬಾರಿ ಗೆದ್ದದ್ದು ಇದನ್ನೇ ಸೂಚಿಸುತ್ತದೆ. ಈ ಹಿಂದೆ ಮಹಿಳೆಯರಲ್ಲಿ ಕ್ರಿಸ್ ಎವರ್ಟ್ ಅವರನ್ನು ಹೀಗೆ ಬಣ್ಣಿಸಲಾಗುತ್ತಿತ್ತು. ಅವರು 7 ಸಲ ಫ್ರೆಂಚ್ ಓಪನ್ ಪ್ರಶಸ್ತಿಯನ್ನು ಗೆದ್ದವರು; ಅದರಲ್ಲೂ ‘ಸತತ’ ಆರು ಸಲ ಗೆದ್ದ ದಾಖಲೆ ಬರೆದವರು. ಅದು ಬಿಟ್ಟರೆ ವಿಶ್ವ ಚಾಂಪಿಯನ್ ಬಾರ್ನ್ ಬಾರ್ಗ್ ಅವರನ್ನೂ ಆವೆ ಅಂಕಣದ ಸರ್ವಶ್ರೇಷ್ಠ ಆಟಗಾರ ಎಂದು ಬಣ್ಣಿಸಲಾಗಿತ್ತು. ಬಾರ್ಗ್ ಆರು ಸಲ ಫ್ರೆಂಚ್ ಓಪನ್ ಗೆದ್ದು ದಾಖಲೆ ಬರೆದವರು. ಇನ್ನೊಬ್ಬಾತ ಗುಸ್ತಾವೊ ಆವೆ ಅಂಕಣದಲ್ಲಿ ಅತ್ಯುತ್ತಮ ಆಟಗಾರ. ಆದರೆ ರಫಾ ಈ ಎಲ್ಲರನ್ನೂ ಮೀರಿಸಿದ ಆಟಗಾರ. ಉದಾಹರಣೆಗೆ ಬಾರ್ಗ್ ಕೊನೆಯ ಫ್ರೆಂಚ್ ಓಪನ್ ಗೆದ್ದಾಗ ಆತನ ವಯಸ್ಸು 25. ಅದೇ ಗುಸ್ತಾವೋ ಕೊನೆಯ ಆವೆ ಅಂಕಣದ ಪ್ರಶಸ್ತಿ ಗೆದ್ದಾಗ ಆತನ ವಯಸ್ಸು 27. ರಫಾ ನಡಾಲ್‌ಗೆ ಈಗ 31 ವರ್ಷ. ಜೂನ್ 3ರಂದು ಹುಟ್ಟುಹಬ್ಬ ಆಚರಿಸಿದ ರಫಾ, ಅದೇ ವಾರದಲ್ಲಿ ಫ್ರೆಂಚ್ ಕಿರೀಟದ ದಶಸಂಭ್ರಮವನ್ನೂ ತನ್ನದಾಗಿಸಿಕೊಂಡ.

31ನೇ ವಯಸ್ಸಿನಲ್ಲಿ ಸಾಮಾನ್ಯವಾಗಿ ಟೆನಿಸ್‌ನ ಅತಿರಥರೆಲ್ಲ ನಿವೃತ್ತಿ ಹೊಂದಿ ಮನೆಯಲ್ಲಿ ಇದ್ದದ್ದು ಇತಿಹಾಸ. ಸದ್ಯಕ್ಕೆ ಫೆಡರರ್ 35ರ ಹರೆಯದಲ್ಲಿದ್ದಾನೆ. ಅದು ಬಿಟ್ಟರೆ ರಫಾನದ್ದೇ ಅತ್ಯಧಿಕ ವಯಸ್ಸು. ಮುಂದಿನ ವಿಂಬಲ್ಡನ್ ಮೇಲೆ ಕಣ್ಣಿಟ್ಟಿರುವ ಈ ಇಬ್ಬರನ್ನೂ ಈಗ ಟೆನಿಸ್‌ಪ್ರಿಯರು ಕುತೂಹಲದಿಂದ ಗಮನಿಸುತ್ತಿದ್ದಾರೆ.

ಟೆನಿಸ್‌ನಲ್ಲಿ ಗ್ರಾಸ್ ಕೋರ್ಟ್ (ಹಸಿರು ಹುಲ್ಲು), ಹಾರ್ಡ್ ಕೋರ್ಟ್ ಮತ್ತು ಕ್ಲೇ ಕೋರ್ಟ್– ಈ ಮೂರರಲ್ಲೂ ಅತ್ಯುತ್ತಮ ಪ್ರದರ್ಶನ ನೀಡಿರುವ ರಫಾ ಈಗಾಗಲೆ ಎರಡು ವಿಂಬಲ್ಡನ್ ಮತ್ತು ಎರಡು ಯುಎಸ್ ಓಪನ್ ಗ್ರ್ಯಾನ್‌ಸ್ಲಾಮ್ ಗಳನ್ನು ಗೆದ್ದಿದ್ದಾನೆ. ಒಮ್ಮೆ ಆಸ್ಟ್ರೇಲಿಯನ್ ಪ್ರಶಸ್ತಿ ಗಳಿಸಿದ್ದಾನೆ. ಈ ಮೂರೂ ಅಂಕಣಗಳಲ್ಲಿ ಆವೆ ಮಣ್ಣಿನ ಅಂಕಣದ ಆಟಕ್ಕೆ ಹೆಚ್ಚು ಮಾನಸಿಕ ಮತ್ತು ದೈಹಿಕ ದೃಢತೆ ಅಗತ್ಯವಿದೆ. ಈ ದೃಷ್ಟಿಯಿಂದ ನೋಡಿದರೂ ರಫಾ ಎಲ್ಲರಿಗಿಂತ ಶ್ರೇಷ್ಠ ಆಟಗಾರ ಎನ್ನಬಹುದು. ಗ್ರಾಸ್‌ಕೋರ್ಟ್ ವೇಗದ ಆಟಕ್ಕೆ ಹೆಸರಾದರೆ, ಕ್ಲೇ ಕೋರ್ಟ್ ನಿಧಾನದ ಆಟಕ್ಕೆ ಖ್ಯಾತಿ ಹೊಂದಿದೆ. ಈವರೆಗೆ ಕ್ಲೇ ಕೋರ್ಟ್‌ನಲ್ಲಿ ರಫಾ ‘ಬೆಸ್ಟ್ ಆಫ್ ಫೈವ್’ನ ಒಟ್ಟು 100 ಪಂದ್ಯಗಳನ್ನು ಆಡಿರುವುದು ಕೂಡಾ ಒಂದು ದಾಖಲೆಯೇ. 2014ರಿಂದ ಹಲವು ಸಲ ಗಾಯಾಳುವಾಗಿ, ‘ಈತನ ಆಟ ಮುಗಿಯಿತು’ ಎಂದು ವಿಶ್ಲೇಷಕರು ಬರೆಯುತ್ತಲೇ ಇದ್ದಾರೆ. ಆದರೆ ರಫಾ ಫೀನಿಕ್ಸ್‌ನಂತೆ ಮತ್ತೆ ಮತ್ತೆ ಚಾಂಪಿಯನ್ ಆಗುತ್ತಲೇ ಇದ್ದಾನೆ! ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65